


# ಅದ್ಭುತ ರೇಡಿಯೊ ಸಂಗ್ರಹಾಲಯ!

**ಎಲೆಕ್ಟ್ರಾನಿಕ್ ಎಂಜಿನಿಯರ್ ರೇಡಿಯೊ ಪ್ರೇಮ ಇತಿಹಾಸಕಾರರನ್ನಾಗಿ ರೂಪಿಸಿದೆ. ಅವರಲ್ಲಿರುವ ರೇಡಿಯೊ ಸಂಗ್ರಹ ಅದರ ಇತಿಹಾಸವನ್ನು ಅನುಸಂಧಾನ ಮಾಡುವ ಜೊತೆಗೆ ಕುತೂಹಲದ ಕಥನವನ್ನು ಹೇಳುತ್ತದೆ.**




■ **ಧರ್ಮಾನಂದ ಶಿರ್ವ**

ಹವ್ಯಾಸದ ಒಲವು ವ್ಯಕ್ತಿಯೊಬ್ಬನನ್ನು ಯಾವ ಮಟ್ಟಕ್ಕೆ ತಂದು ನಿಲ್ಲಿಸುತ್ತದೆ ಅನ್ನುವುದಕ್ಕೆ ಬೆಂಗಳೂರಿನ ಬಸವೇಶ್ವರ ನಗರದಲ್ಲಿ ನೆಲೆನಿಂತಿರುವ ಉದಯ ಕಲ್ಬುರ್ಗಿ ನಿದರ್ಶನ. ಅವರ ರೇಡಿಯೊ ಸಂಗ್ರಹಾಲಯ ಅಧ್ಯಯನಯೋಗ್ಯ ಕೇಂದ್ರ. ಪ್ರತಿ ರೇಡಿಯೊ ಹುಟ್ಟು, ಇತಿಹಾಸ, ಕಾರ್ಯಕ್ಷಮತೆ, ತಾಂತ್ರಿಕ ಹೆಚ್ಚುಗಾರಿಕೆ, ಅದು ತಮಗೆ ದಕ್ಕಿದ ಸ್ವಾರಸ್ಯಕರ ಸಂಗತಿಗಳ ಖಜಾನೆಯೇ ಇದೆ. ವಿಶೇಷವೆಂದರೆ, ಇರುವ ದೇಶವಿದೇಶಗಳ ಸುಮಾರು 260 ರೇಡಿಯೊಗಳ ಪೈಕಿ 120 ವಿಶಿಷ್ಟವಾಗಿವೆ. ಶೇಕಡ 60ರಷ್ಟು ಇವತ್ತಿಗೂ ಜೀವಂತವಾಗಿವೆ.

ಅವರು ಎಂಜಿನಿಯರಿಂಗ್‌ನಲ್ಲಿ ಓದಿದ ಎಲೆಕ್ಟ್ರಾನಿಕ್ಸ್ ವಿಷಯದ ಪ್ರಾಯೋಗಿಕ ಅಳವಡಿಕೆ. ದೇಶವಿದೇಶಗಳಿಂದ ಬಿಡಿಭಾಗಗಳನ್ನು ತರಿಸಿ ತಾವೇ ಜೋಡಿಸಿ ರೇಡಿಯೊಗೆ ಮರುಜೀವ ಕೊಡುವಲ್ಲಿ ನಿಸ್ಸೀಮರು. ಒಂದು ಶತಮಾನ ಕಾಲದ ಬೇರೆ ಬೇರೆ ದೇಶಗಳ, ವಿಭಿನ್ನ ವಿನ್ಯಾಸದ, ಪರಿಷ್ಕೃತ ತಾಂತ್ರಿಕತೆಯನ್ನು ಒಳಗೊಂಡ ವಾಲ್ (Wall) ರೇಡಿಯೊಗಳು ಇವರ ಸಂಗ್ರಹಕ್ಕೆ ಸಿಕ್ಕ ಕತೆಗಳೇ ರೋಚಕವಾಗಿವೆ.

ಒಂದು ನೆಲದ ಭಾಷೆ, ಸಂಸ್ಕೃತಿ, ಹಾಡು, ನಾಟಕ, ಸುದ್ದಿ, ಕೃಷಿ ಸಮಾಚಾರಗಳನ್ನು ಬಿತ್ತರಗೊಳಿಸುತ್ತಿದ್ದ ಆಕಾಶವಾಣಿಯ ಧ್ವನಿತರಂಗಗಳ ಶಬ್ದರೂಪದ ಕೇಳುವಿಕೆಗೆ ಮುಖವಾಣಿಯಾದದ್ದು